ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 292/2020

ಫಿಯಾದಿಃ ಸರಕಾರ

- ವಿರುದ್ಧ -

ಆರೋಪಿತರುಃ ರಾಜೇಶ್ ಬೊಮ್ಮಯ್ಯ ಗುನಗಾ,
ಪ್ರಾಯಃ 29 ವರ್ಷ,
ಸಾಃ ಮೊಗಟಾ,
ಅಂಕೋಲಾ ತಾಲೂಕು

## ದೋಷಾರೋಪಣೆ

ನಾನು ಪ್ರಶಾಂತ ಬಾದವಾಡಗಿ, ಬಿ.ಎ..,ಎಲ್.ಎಲ್.ಬಿ.,(ಸ್ಪೇ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ..

ದಿನಾಂಕಃ 12.08.2018 ರಂದು ಬೆಳಿಗ್ಗೆ 9.30 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಹೊಸಗದ್ದೆ ಗ್ರಾಮದ ಕೆಎಸ್ಆರ್ ಟಿ ಸಿ ಬಸ್ ಡೀಪೋದಲ್ಲಿ ಆರೋಪಿಯಾದ ನೀನು ಫಿರ್ಯಾದಿಯ ಮೇಲಿನ ದ್ವೇಷದಿಂದ ಇದ್ದವನು ಕೆಎಸ್ಆರ್ ಟಿ ಸಿ ಡಿಪೋ ಘಟಕಕ್ಕೆ ಬಂದು 6 ನೇ ಸಾಕ್ಷಿದಾರರಾದ ಮಂಜುನಾಥ ಲಕ್ಷ್ಮಣ ನಾಯ್ಕ ಇವರಿಗೆ '**ಬೋಳಿ ಮಗನೆ, ಸೂಳೆ ಮಗನೆ ನಿನ್ನ ತಾಯಿನ ಹಡಾ ನನಗೆ ಸಸ್ಪೆಂಡ ಮಾಡುತ್ತಿಯಾ ನಿನಗೆ ಬಿಡುವುದಿಲ್ಲ**' ಅಂತಾ ಹಾಗೂ 7 ನೇ ಸಾಕ್ಷಿದಾರರಾದ ಹುಚನಪ್ಪಾ ಯಮನಪ್ಪಾ ಚಲವಾದಿ ಇವರಿಗೆ '**ಬೋಳಿ ಮಗನೆ ಸೂಳೆಮಗನೆ, ನಿನ್ನ ತಾಯಿನ ಹಡಾ**' ಅಂತಾ ಅವಾಚ್ಯ ಬೈದು ಮತ್ತು

ಫಿರ್ಯಾದಿಗೆ ದೂರವಾಣಿಯ ಮುಖಾಂತರ '**ಬೋಳಿ ಮಗನೆ ಸೂಳೆಮಗನೇ ನಿನ್ನ ತಾಯಿನ ಹಡಾ ನನಗೆ ಸಸ್ಪೆಂಡ್ ಮಾಡಿಸಿದ್ದಿಯಾ**' ಅಂತಾ ಅವಾಚ್ಯ ಶಬ್ದದಿಂದ ಬೈದು ಆ ಮೂಲಕ ಭಾ.ದಂ.ಸಂ.ಕಲಂ 504 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಎರಡನೆಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಫಿರ್ಯಾದಿಗೆ " **ನಿ ಹೆಂಗ ಅಂಕೋಲಾದಲ್ಲಿ ಬಾಳತಿಯಾ ನೋಡಕ್ಯೊತಿನಿ** " ಅಂತಾ ಜೀವದ ಬೆದರಿಕೆ ಹಾಕಿ ಆ ಮೂಲಕ ಭಾ.ದಂ.ಸಂ.ಕಲಂ 506 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಮೂರನೇಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಸಾಕ್ಷಿದಾರರಾದ ಮಂಜುನಾಥ, ಹುಚನಪ್ಪಾ ಮತ್ತು ಫಿರ್ಯಾದಿಯಾದ ಅಪ್ಪಯ್ಯ ಶಿವಲಿಂಗಯ್ಯ ಇವರಿಗೆ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಆ ಮೂಲಕ ಭಾ.ದಂ.ಸಂ.ಕಲಂ 353 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

(ಮೇಲಿನ ಅಪರಾಧಗಳನ್ನು ಆರೋಪಿತರಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 10-08-2022 ರಂದು ಆದೇಶಿಸುತ್ತೇನೆ.)

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 10-08-2022 ಪ್ರ ದಂ ನ್ಯಾದಂ, ಅಂಕೋಲಾ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 292/2020

ಪಿರ್ಯಾದಿಃ ಸರಕಾರ - ವಿರುದ್ಧ - ಆರೋಪಿ ರಾಜೇಶ್ ಬೊಮ್ಮಯ್ಯ ಗುನಗಾ,

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 10-08-2022 ಪ್ರ ದಂ ನ್ಯಾದಂ, ಅಂಕೋಲಾ.

ಆರೋಪಿಯ ಸಹಿ